ಹಾಕಿಕೊಂಡು ವಿದ್ಯುತ್ತನ್ನು ಅನಧಿಕೃತವಾಗಿ ಬಳಸುತ್ತಿರುವುದು ಕಂಡು ಬಂದಲ್ಲಿ, ಇಂತಹ ಸಂದರ್ಭಗಳಲ್ಲಿ ಮಾತ್ರ ವಿದ್ಯುತ್ ಕಂಬದಲ್ಲಿ ಅಳವಡಿಸಿರುವ ಫ್ಯೂಸನ್ನು ತೆಗೆಯುವ ಮೂಲಕ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ. ಇದನ್ನು ಹೊರತುಪಡಿಸಿ, ಇತರ ಸಬ್ ಮೀಟರ್ ಗ್ರಾಹಕರಿಗೆ ಯಾವ ರೀತಿಯ ತೊಂದರೆಯೂ ಉಂಟಾಗುವುದಿಲ್ಲ. ಅಲ್ಲದೇ, ವಿದ್ಯುತ್ ಗ್ರಾಹಕರು ಇಚ್ಛಿಸಿದಲ್ಲಿ ಪ್ರತೀ ಸ್ಥಾವರಕ್ಕೆ ಪ್ರತ್ಯೇಕವಾದ ಸರ್ವೀಸ್ ಮೈನ್ ಮೂಲಕ ವಿದ್ಯುತ್ ಸಂಪರ್ಕವನ್ನು ಪಡೆಯಬಹುದಾಗಿರುತ್ತದೆ.

ಇ) ಪ್ರಶ್ನೆ 'ಅ' ಮತ್ತು 'ಆ' ಭಾಗಗಳ ಉತ್ತರದಲ್ಲಿ ನೀಡಿರುವ ವಿವರಗಳ ಹಿನ್ನೆಲೆಯಲ್ಲಿ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಯೋಜನೆಗಳು

5109 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಪವರ್ ಪ್ರಾಜೆಕ್ಟ್‌ಗಳಿಗೆ ಕರಾರು ಮಾಡಿಕೊಂಡಿದೆ? ಯಾವ ಜೊತೆಯಲ್ಲಿ ಯಾವ ಜಿಲ್ಲೆಯಲ್ಲಿ ಯಾವ ಷರತ್ತುಗಳಿಗೊಳಪಟ್ಟು ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)

ಆ) ದೀಪಕ್ ಪರೇಕ್ ಕಮಿಟಿಯ ಶಿಫಾರಸ್ಸಿನಂತೆ ಪಿ.ಪಿ.ಎ. ಗಳಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ದೀಪಕ್ ಪರೇಕ್ ಸಮಿತಿಯ ಶಿಫಾರಸ್ಸುಗಳ ಪ್ರಕಾರ ಕರ್ನಾಟಕ ಸರ್ಕಾರವು Escrow ಸೌಲಭ್ಯವನ್ನು ರಾಜ್ಯದಲ್ಲಿ ಸ್ಥಾಪಿಸಲ್ಪಡುವ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ನೀಡದೇ ಇರಲು ತೀರ್ಮಾನಿಸಿರುತ್ತದೆ. ಆದಾಗ್ಯೂ ಶ್ರೇಷ್ಠ ನ್ಯಾಯಾಲಯದ ಆದೇಶದ ಪ್ರಕಾರ ಮೆ. ತಣ್ಣೀರ್ ಬಾವಿ ಕಂಪನಿಯು ಮಂಗಳೂರಿನಲ್ಲಿ ಸ್ಥಾಪಿಸುತ್ತಿರುವ ಬಾರ್ಜ್ ಮೌಂಟೆಡ್ ವಿದ್ಯುತ್ ಉತ್ಪಾದನಾ ಯೋಜನೆಗೆ Escrow ಸೌಲಭ್ಯವನ್ನು ನೀಡಿರುತ್ತದೆ. ದೀಪಕ್ ಪರೇಕ್ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಮತ್ತು ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ ವಿಷಯಗಳ ವಿವರವಾದ ಪರಿಶೀಲನೆಗಾಗಿ ಸರ್ಕಾರವು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿರುತ್ತದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬಿಡ್ ಹಾಗೂ ಎಂ.ಒ.ಯು/ಜಿ.ಒ.ಗಳ ಮೂಲಕ ಸ್ಥಾಪಿಸಲು ಅನುಮೋದನೆ ಕೊಟ್ಟಿರುವ ಪವರ್ ಪ್ರಾಜೆಕ್ಟ್‌ಗಳ ವಿವರ

ಕ್ರ. ಸಂ.	ವಿದ್ಯುತ್ ಉತ್ಪಾದನಾ ಯೋಜನೆಯನ್ನು ನಿರ್ವಹಿಸುವ (ಸ್ಥಾಪಿಸುವ) ಕಂಪನಿಯ ಹೆಸರು	ಸ್ಥಳ/ಜಿಲ್ಲೆ ಹಾಗೂ ಉಪಯೋಗಿಸುವ ಇಂಧನ	ಒಟ್ಟು ಸಾಮರ್ಥ್ಯ ಮೆ.ವಾಟ್‌ಗಳಲ್ಲಿ ಹಾಗೂ ಸಂಕ್ಷಿಪ್ತ ಪಿ.ಪಿ.ಒ. ಸ್ಥಿತಿ	ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಹಾಕಿದ ದಿನಾಂಕ
1	2	3	4	5
ಕಾಂಪಿಟಿಟೀವ್ ಬಿಡ್ ರೂಟ್ ಪವರ್ ಪ್ರಾಜೆಕ್ಟ್‌ಗಳು				
1.	ಡಿ.ಎಲ್.ಎಫ್. ಪವರ್ ಲಿಮಿಟೆಡ್	ತುಮಕೂರು ಎಫ್.ಒ.ಎಲ್.ಎಸ್. ಹೆಚ್.ಎಸ್.	32.5 ಮೆ. ವ್ಯಾಟ್	30.4.98
2.	ಟಾಟಾ ಎಲೆಕ್ಟ್ರಿಕ್ ಕಂ.	ಬೆಳಗಾಂ ಎಫ್.ಒ:ಎಲ್.ಎಸ್. ಹೆಚ್.ಎಸ್.	81.3 ಮೆ.ವ್ಯಾಟ್ ಸ್ಥಾವರವು 2001ನೇ ಮಾರ್ಚ್ ಹೊತ್ತಿಗೆ ಕಾರ್ಯ ನಿರ್ವಹಿಸುವ ನಿರೀಕ್ಷೆ ಇದೆ.	10.2.98
3.	ಸಿಂಟಿಲ್ಲಾ ಪವರ್ ಲಿಮಿಟೆಡ್	ವೈಟ್‌ಫೀಲ್ಡ್ ಬೆಂಗಳೂರು, ಎಫ್.ಒ.: ಎಲ್.ಎಸ್. ಹೆಚ್.ಎಸ್	79.5 ಮೆ.ವ್ಯಾಟ್	15.12.97

1	2	3	4	5
4.	ಶ್ರೀ ರಾಯಲಸೀಮ ಆಲ್ಕಾಲೀಸ್ ಅಂಡ್ ಅಲೈಡ್ ಕೆಮಿಕಲ್ಸ್ ಲಿಮಿಟೆಡ್	ಬಳ್ಳಾರಿ ಎಫ್.ಒ:ಎಲ್.ಎಸ್. ಹೆಚ್.ಎಸ್	27.8 ಮೆ.ವ್ಯಾಟ್ ಸ್ಥಾವರವು ಸೆಪ್ಟೆಂಬರ್ 2000 ರಿಂದ ಕಾರ್ಯ ನಿರ್ವಹಿಸುತ್ತಿದೆ.	15.12.97
5.	ಆಟ್ರಿಯ ಪವರ್ ಕಾರ್ಪೊರೇಷನ್	ಹರಿಹರ/ದಾವಣಗೆರೆ ನ್ಯಾಫ್ತಾ	103 ಮೆ.ವ್ಯಾಟ್	-"-
6.	ಭಾರತ್ ಫೋರ್ಜ್ ಲಿಮಿಟೆಡ್	ಕೊಪ್ಪಳ ನ್ಯಾಫ್ತಾ	50.8 ಮೆ. ವ್ಯಾಟ್	-"-
ಬಾರ್ಜ್ ಮೌಂಟೆಡ್ ಪವರ್ ಪ್ಲಾಜೆಕ್ಟ್‌ಗಳು				
1.	ತಣ್ಣೀರ್‌ಬಾವಿ ಪವರ್ ಕಂ.	ಮಂಗಳೂರು ದಕ್ಷಿಣ ಕನ್ನಡ, ನ್ಯಾಫ್ತಾ	220 ಮೆ.ವ್ಯಾಟ್ ಸ್ಥಾವರವು 2001ನೇ ಮಾರ್ಚ್ ಹೊತ್ತಿಗೆ ಕಾರ್ಯನಿರ್ವಹಿಸುವ ನಿರೀಕ್ಷೆ ಇದೆ.	15.12.97
2.	ಸ್ಮಿತ್ ಕೋಜನರೇಷನ್ ಇಂಡಿಯಾ ನ್ಯಾಫ್ತಾ	ಮಂಗಳೂರು/ ದಕ್ಷಿಣ ಕನ್ನಡ	170 ಮೆ.ವ್ಯಾಟ್	7.5.99
3.	ಯೂರೋ ಇಂಡಿಯಾ ಪವರ್ ಕೆನರಾ ಪ್ರೈವೇಟ್ ಲಿಮಿಟೆಡ್	ಮಂಗಳೂರು ನ್ಯಾಫ್ತಾ	195 ಮೆ.ವ್ಯಾಟ್	22.4.99
ಎಂಒಯು/ಜಿಬ್ ರೂಟ್				
1.	ಹಾಸನ್ ಪವರ್ ಸಪ್ಲೈ ಕಂ. ನ್ಯಾಫ್ತಾ	ಹಾಸನ	189 ಮೆ.ವ್ಯಾ	31.3.99

1	2	3	4	5
2.	ಇಂಡಿಯಾ ಪವರ್ ಪಾರ್ಟನರ್ಸ್	ಮಂಡ್ಯ ನಾಫ್ತಾ	164.37 ಮೆ.ವ್ಯಾ	28.7.99
3.	ಪೀಣ್ಯ ಪವರ್ ಕಂ.	ಕಣಿಮಿಣಿಕ್, ಬೆಂಗಳೂರು, ನ್ಯಾಫ್ತಾ	107.6 ಮೆ.ವ್ಯಾ.	22.10.99
4.	ಮಂಗಳೂರು ಪವರ್ ಕಂ.	ನಂದಿಕೂರ್ ದಕ್ಷಿಣ ಕನ್ನಡ, ಕಲ್ಲಿದ್ದಲು	1013.2 ಮೆ.ವ್ಯಾ	17.11.97
ಸಂಪ್ರದಾಯವಲ್ಲದ ಶಕ್ತಿ ಮೂಲಗಳು : (ನಾನ್ ಕನ್‌ವೆನ್‌ಷನ್ ಎನರ್ಜಿ ಸೋರ್ಸ್)				
1.	ಗ್ಲೋಬಲ್ ಎನರ್ಜಿ ಲಿಮಿಟೆಡ್	ಬೆಳಗುಂದಿ, ಬೆಳಗಾಂ ಜಿಲ್ಲೆ, ಬಗ್ಯಾಸೆ	16 ಮೆ. ವ್ಯಾಟ್	2.1.97